ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 32.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 8, ಸನ್ 1907.

II ನೇ ಭಾಗ.

ಇಂಡಸ್ಟ್ರಿಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ಗಳು ಮೈಸೂರಿನಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್ನಾಮೆ.

ತಾರೀಖು 30ನೆ ಜುಲೈ 1907.

ಬವರಿಂಗಪೇಟೆ ತಾಲ್ಲೂಕಿನಲ್ಲಿರುವ ಕಾಮಸಂದ್ರ ಸ್ಟೇಟ್ ಫಾರೆಸ್ಟ್ ಪೈಕಿ ಈ ಕೆಳಗೆ ಕಂಡ ತಾಕುಗಳಲ್ಲಿರುವ ಸಾದೆಯನ್ನು 1907ನೆ ಇಸವಿ ಸೆಪ್ಟಂಬರ್ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜೂ ಆಖೈರ್ ವರಿಗೆ ಕಡದು ಸಾಗಿಸಿಕೊಂಡು ಹೋಗತಕ್ಕ ಹಕ್ಕು 1907ನೆ ಇಸವಿ ಆಗಸ್ಟ್ 19ನೆ ತಾರೀಖು ಸೋಮವಾರ ಮಧ್ಯಾಹ್ನ 2 ಘಂಟೆಗೆ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಟೆಂಡರ್‌ಗಳ ಮೂಲಕ ವಿಕ್ರಯಿಸಲ್ಪಡುವದು. ಟೆಂಡರು ಹಾ॥ ಕ್ಯಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಬಳಿಪಟ್ಟಿರುತ್ತೆ.

ಸ್ಥಳ.		ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.
ಬ್ಲಾಕು ನಂಬರ್.	ತಾಕು ನಂಬರ್.		
1	8	376	1. ಟಿಗರೆ 2. ನಲ್ಲಬಲಸು 3. ದೇವದಾರಿ 4. ಗೊರವಿ 5. ಈಜಿ ಮತ್ತು ಜವುಬೀನೆಗೆ ನಾಲಾಯಖಾಗಿರತಕ್ಕ ಇತರ ಸಾದೆ ಜಾತಿ ಮರಗಳು.
IV	8	311	ಡಿಟೋ ಡಿಟೋ

(2) ಪ್ರತಿ ಒಂದು ಕೂಪಿಗೆ ಬೇರೆ ಬೇರೆ ಟೆಂಡರ ಕಳುಹಿಸಬೇಕು ಮತ್ತು ಸದರಿ ಟೆಂಡರಿನಲ್ಲಿ ಇಷ್ಟು ಮೊಬಲಗೆಂದು ಸ್ಪಷ್ಟವಾಗಿ ನಮೂದಿಸಬೇಕು. ಪ್ರತಿ ದರಖಾಸ್ತು ಯ್ಹಾನೆ ಟೆಂಡರುಗಳೊಡನೆ ಒಂದುನೂರು ರೂಪಾಯಿನ ಚಲಾವಣಿ ನೋಟು ಅಡಕವಿರಬೇಕು. ಟೆಂಡರುಗಳನ್ನು ಮೊಹರು ಮಾಡಿರುವ ಕವರುನಲ್ಲಿ ರಿಜಿಸ್ಟರ್ ಮಾಡಿ ಪೋಸ್ಟು ಮೂಲಕವಾಗಿಯಾಗಲಿ ಅಥವಾ ಅಂಥಾ ಕವರುಗಳು ರೂಬರೂಬ್ ಆಗಲಿ ಈ ಕೆಳಗೆ ಸೈನ್ ಮಾಡಿರುವವರಲ್ಲಿಗೆ ಟೆಂಡರುಗಳನ್ನ ಒಡಿಯಲು ನಿಯಮಿಸಿರುವ ಕಾಲಕ್ಕಿಂತ ಮುಂದೆಯೇ ಬಂದು ಸೇರುವಂತೆ ರವಾನಿಸಬೇಕು ಅಥವಾ ಕೊಡಬೇಕು. ಕವರಿನ ಮೇಲ್‌ಭಾಗದಲ್ಲಿ "ತಾವುಸಂದ್ರದ ಫಾರೆಸ್ಟು ಕೂಪುಗಳ ಸಾದೆ ದರಖಾಸ್ತು" ಎಂದು ಬರಿಯಬೇಕು. ದರಖಾಸ್ತು ಮಂಜೂರಾಗದವರ ಶೇವಣಾತಿ ಮೊಬಲಗು ಒಡನೆ ವಾಪಸು ಮಾಡಲ್ಪಡುತ್ತೆ.

(3) ಟೆಂಡರ್ ಒಡಿಯತಕ್ಕ ಆಫಿಸರು ಯಾವ ಟೆಂಡರನ್ನಾಗಲಿ ಅಥವಾ ಎಲ್ಲಾ ಟೆಂಡರನ್ನಾಗಲಿ ಯಾವ ಕಾರಣವನ್ನು ನಮೂದಿಸದೆ ತಿರಸ್ಕರಿಸತಕ್ಕ ಹಕ್ಕನ್ನ ವುಳಿಸಿಕೊಂಡಿರುತ್ತಾರೆ.

(4) ಹರಾಜು ಮಂಜೂರಾದ ಸಂಗತಿಯು ತಿಳಿದ ಒಂದು ವಾರದ ವಳಗಾಗಿ ಚಡ ದರಖಾಸ್ತುದಾರನು ಮೊಬಲಗಿನ ದರ ಖಾಸ್ತುಪೈಕಿ ಅರ್ಧ ಮೊಬಲಗನ್ನ ಟಿವರಿಂಗಪೇಟೆ ತಾಲ್ಲೂಕು ಖಜಾನೆಗೆ ಜಮಾ ಕಟ್ಟಿಸಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದಾಖಲೆ ಬಗ್ಗೆ ಇಟ್ಟುಕೊಂಡಿರುವ ಮುಚ್ಚಳಿಕೆಯಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ಬಾಂಡು ಬರದುಕೊಡಬೇಕು. ಉಳಿದ ಮೊಬಲಗನ್ನ ಎರಡು ಸವು ಖಿಸ್ತುಗಳಲ್ಲಿ ಅಂದರೆ ಇದರಡಿ ಕಂಡ ತಾರೀಖುಗಳಲ್ಲಿ ಸರ್ಕಾರಕ್ಕೆ ಪಾವತೀ ಮಾಡಬೇಕು.

1ನೆ ಖಿಸ್ತು ... 1907ನೆ ಇಸವಿ ನವಂಬರ್ 30.
2ನೆ ,, ... 1908ನೆ ಇಸವಿ ಜನವರಿ 31.

(5) ಮೇಲಿನ ಪ್ಯಾರಾದಲ್ಲಿ ನಮೂದಿರುವಂತೆ ಚಡ ದರಖಾಸ್ತುದಾರನು ಹಣ ಪಾವತಿ ಮಾಡುವ ವಿಷಯದಲ್ಲಾಗಲಿ ಮುಚ್ಚಳಿಕೆ ಬರಕೊಡುವ ವಿಷಯದಲ್ಲಾಗಲಿ ತಪ್ಪುದರೆ ತಾನು ಕೊಟ್ಟಿರುವ (100) ಒಂದುನೂರು ರೂಪಾಯಿಗಳನ್ನು ಸರ್ಕಾರಕ್ಕೆ ದಂಡವಾಗಿ ಕೀರಿಸಿಕೊಂಡು ಕಂಟ್ರಾಕ್ಟಿನ ಹಕ್ಕನ್ನು ತಪ್ಪಿಸಿ ಬಾಬನ್ನೆ ದುಸರಾ ಹರಾಜು ಮಾಡಿಸಲ್ಪಡುತ್ತೆ. ಸದರಿ ಎರಡನೆಯ ಹರಾಜಿನಲ್ಲಿ ವುಂಟಾಗುವ ನಷ್ಟಕ್ಕೆ ಮೊದಲಿನ ಇಜಾರೆದಾರನು ಗುರಿಯಾಗುತ್ತಾನೆಯೇ ಶಿವಾಯಿ ಅದರಿಂದ ಉಂಟಾಗಬಹುದಾದ ಫಾಯಿದೆಗೆ ಈತನಿಗೆ ಹಕ್ಕಿರುವದಿಲ್ಲ. ನಷ್ಟದ ಮೊಬಲಗನ್ನು ರೆವಿನ್ಯೂ ರೂಲ್ಸು ಅನುಸರಿಸಿ ತಪ್ಪುತಸ್ಥನಾದ ಇಜಾರೆದಾರನಿಂದ ವಸೂಲ್ಮಾಡಲ್ಪಡುತ್ತೆ.

(6) ಕಂಟ್ರಾಕ್ಟುದಾರನು ಪೂರಾ ಮೊಬಲಗು ಸಲ್ಲಿಸಿದ್ದಾಗ್ಯೂ ಮತ್ತು ಹಾತ್ ಲಾಗವಡುನಿಂದ ಸ್ಟೇಟ್ ಫಾರೆಸ್ಟಿನಲ್ಲಿ ಕಟ್ಟಿಗೆಯನ್ನು ಕಡಿಸಿ ಜಮಾಯಿಸಿದ್ದಾಗ್ಯೂ 1908ನೆ ಜೂ ಆಖೈರ್ ಆದ ನಂತರ ಮೇಲೆ ನಮೂದಿಸಿರುವ ಕೂಪುಗಳಲ್ಲಿ ವುಳಿದು ಹೋಗುವ ಮರಗಳಿಗೂ ಸ್ಟೇಟ್ ಫಾರೆಸ್ಟ್ ಎಲ್ಲೆಯಿಂದ 5 ಮೈಲಿ ಹೊರ ಹೊರಪಡಿಸದೆ ವುಳಿದುಹೋಗುವ ಕಟ್ಟಿಗೆಗೂ ಸಹಾ ಇವರಿಗೆ ಹಕ್ಕು ಇರುವದಿಲ್ಲ.

(7) ಉಳಿಸಲ್ಪಟ್ಟಿರುವ ಜಾತಿ ಮರಗಳನ್ನು ಬೀಜಕ್ಕೋಸ್ಕರ ಗುರ್ತುಮಾಡಿ ನಂಬರು ಹಾಕಿರುವ ಮರಗಳನ್ನು ಬಂದು ಅಡಿ ಸುತ್ತಳತೆಗೆ ಕಮ್ಮಿ ಇರತಕ್ಕ ಸೊಸಿಗಳನ್ನು, ಫಲವೃಕ್ಷಗಳನ್ನು, ಪಸಾರೆ ಜಿನಿಸಿಯಾಗತಕ್ಕ ಮರಗಳನ್ನು ಕಡಿಯಕೂಡದು ಮತ್ತು ಇತರ ಕೆಲಸ ಮಾಡುವುದರಲ್ಲಿ ಅವುಗಳಿಗೆ ಇಜಾ ಸಹಾ ಮಾಡಕೂಡದು.

(8) ಇಜಾರೆದಾರನು ಮಾಡುವ ಅಹವಾಲ್ ವಿಚಾರದಲ್ಲಿ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಹುಕುಂ ಆಖೈರಾಗಿರುತ್ತೆ.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಂಗಡಿ ಮತ್ತು ಕಕ್ಕೆ ಚಕ್ಕೆ ಇಸ್ತಾಹಾರು, ತಾರೀಖು 20ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಶೇದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ತಂಗಡಿ ಮತ್ತು ಕಕ್ಕೆ ಚಕ್ಕೆದನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿನ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1907ನೆ ಇಸವಿ ಆಗಸ್ಟು ತಾರೀಖು 16ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನಂಬರು	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟು.	ಜಮಾಯಿಸತಕ್ಕ ಕಾಲ.	ಪರಾ
1.	ಮೈಸೂರು ...	1907ನೆ ಸಪ್ಟಂಬರ್ ಗುರ್ರೆ ಲಾಗಾಯಿತು 1908ನೆ ಜೂ ಆಖೈರು ವೆರಿಗೆ.	ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಕೀರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಸ್ಟೇಟ್ ಫಾರೆಸ್ಟು ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಪಳಪಟ್ಟು ಇರುತ್ತೆ.
2	ಕೃಷ್ಣರಾಜಪೇಟೆ ...		
3	ಹಗ್ಗಡದೇವನಕೋಟೆ ...		
4	ಮಳವಳ್ಳಿ ...		

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿ ಬಂದು ದರಖಾಸ್ತಿನೊಡನೆ ಪ್ರತಿ ತಾಲ್ಲೂಕು ಸವಾಲಿಗೂ ನೂರ (100) ರೂಪಾಯಿನ ಕರ್ಣಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್‌ಷೂರ್ ಮಾಡಿ ಲಿಫಾಫೀ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮುಂಜಾರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಮೈಸೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ 1907ನೆ ಆಗಸ್ಟ್ 17ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಬಿಡಿಯುವರು.

(6) ದರಖಾಸ್ತು ಮುಂಜಾರಾತಿ ಸಂಗತಿಯನ್ನ ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(6A) ಪ್ರತಿ ದರಖಾಸ್ತುದಾರನು ದರಖಾಸ್ತಿನಲ್ಲಿ ತನ್ನ ಸರಿಯಾದ ವೈಲು ವಿಳಾಸವನ್ನು ಬರೆಯಬೇಕು.

(7) ದರಖಾಸ್ತು ಮುಂಜಾರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಕೀರ ಅರ್ಧ ಭಾಗವನ್ನು ಆಯಾಯ ತಾಲ್ಲೂಕು ಖಜಾನೆಗೆ ಪಾರಭಾವಣೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಕೀರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನ ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ಮುಂಜಾರಾದ ಇಜಾರೆ ಹಕ್ಕನ್ನು ತಾವೇ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರು ಮುಂಜಾರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆ ಮುಂಜಾರಾದ 3 ದಿವಸಗಳಲ್ಲಿ ಇಜಾರೆದಾರನು ಇದರಲ್ಲಿ ನಮೂದಿರುವ ಷರತ್ತುಗಳಂತೆ ನಡೆಯಲು ಬದ್ಧನಾಗಿರುತ್ತೇನೆಂತ ಒಂದು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಮೊದಲೇ ಕೊಟ್ಟ ಹಣವನ್ನು ದಂಡವಾಗಿ ಸರ್ಕಾರಕ್ಕೆ ಕೀರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

(11) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಈ ಕೆಳಗೆ ಕಂಡ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರಿಯು ಕೊಡಬೇಕು. ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಪ್ತಿವಾಣೆ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನ ರದ್ದು ಮಾಡಲೂಬೀತು.

31ನೆ ಡಿಸೆಂಬರ್ 1907.

ಇತರ ಷರತ್ತುಗಳು.

(I) ಇಜಾರೆದಾರನ ಮತ್ತು ಆತನ ನೌಕರನೇ ಆಗಲಿ ಅಥವಾ ಷಿಕ್ಕಿ ಕಂಟ್ರಾಕ್ಟರೇ ಆಗಲಿ ಒಂದು ವರುಷದೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಪ್ತಿವಾಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಕಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಬಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದ ನಂತರ ಉಳಿಯುವ ಆ ಸಂಬಂಧವಾದ ವಿಷಯ ಸಾದೆಯೂ ಇಜಾರೆದಾರನಿಗೆ ಕೀರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಕ್ಕಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಅಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಳಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಮ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಅತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬೀಳಿಯಂಟುವುದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳಿಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟುಕೊಡಬೇಕು.

(VIII) 1908ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜವಾಬ್ದಾರೀ ಮಾಡಿ ದಾಸ್ತಾ ಮಾಡಿರುವ ಎಲ್ಲಾ ಚಕ್ಕೆಯನ್ನು ಮೈಸೂರು ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರೆಗೂ ಜವಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ ಸಾಹೇಬರು (100) ರೂಪಾಯಿ ವರೆವಿಗೂ ಜುರ್ಮಾನೆಯನ್ನು ಸಹಾ ಇಜಾರದಾರನಿಗೆ ವಿಧಿಸಬಹುದು.

ಇಸ್ತಿಹಾರ್ನಾಮೆ, ತಾರೀಖು 31ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಉದ್ಯಾರ್ಡಿನಲ್ಲಿ ಚೌಬೀನಾವನ್ನು 1907ನೆ ಸೆಪ್ಟೆಂಬರ್ ತಾರೀಖು 31ರಲ್ಲು ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಾಟಾಗಳ ವಿವರ.	ಸಲೆಅಡಿ.		ಷರಾ.
	ನಂಬರ್.	ಅಡಿ.	
ಸಾಗ್ವಾನಿ ಸರಾ	1,725	1,725	ಸಣ್ಣ ಜಿಲ್ಲೆ ಕಡಿನೆ.
ಮತ್ತಿ ನಾಟಾ	211	5,534	
ಡಿಟೋ ಜಂತಿ	30	372	

ಹರಾಜು ಷರತ್ತುಗಳು.

1. ಪ್ರತಿ ಪರಿಚಾರ್ಜ್ದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿವ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಕೇಕಡ ಬಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲ್ ಮಾಡಲಾಗುತ್ತೆ.

ಪಸಾರೆ, ಇಸ್ತಿಹಾರ್.

ತಾರೀಖು 30ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟು ಮತ್ತು ಡಿಸ್ಟ್ರಿಕ್ಟ್ ಜಂಗಲಿಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅವ್ಯತಮಹಲ್ ಮತ್ತು ಪಬ್ಲಿಕ್ ವ್ಯಾಟಲ್ ಕಾನಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಬೇಲಿಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು 1907ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1908ನೆ

ಸೆಪ್ಟಂಬರ್ 30ನೆ ತಾರೀಖಿನ ವರಿಗೆ ಜವಾಯಿಸುವ ಹಕ್ಕನ್ನು ಪಡೆಯಲು 1907ನೆ ಇಸವಿ ಆಗಸ್ಟ್ (ತಾರೀಖು 31ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತು ತೆಗದುಕೊಳ್ಳಲ್ಪಡುವದು.

" ಜಿನಸುಗಳ ತಪಸೀಲು " ಎಂದು ಪರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕುವುದಿಲ್ಲದ ಜಿನಸುಗಳನ್ನು ಜವಾಯಿಸತಕ್ಕ ಹಕ್ಕಿಗೇನೇ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1. ಮೈಸೂರು
2. ಶ್ರೀರಂಗಪಟ್ಟಣ
3. ನಾಗಮಂಗಲ
4. ಕೃಷ್ಣರಾಜಪೇಟೆ
5. ಮಂಡ್ಯ
6. ಮಳವಳ್ಳಿ
7. ಟಿ. ನರಸೀಪುರ
8. ನಂಜನಗೂಡು
9. ಚಾಮರಾಜನಗರ
10. ಗುಂಡ್ಲುಪೇಟೆ
11. ಹೆಗ್ಗಡದೇವನಕೋಟೆ
12. ಹುಣಸೂರು
13. ಯಡತೊರೆ

ಜಿನಸುಗಳ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟುವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮುಡ್ಡಿ, 11. ಬಿಲ್ಲಬೀಜ, 12. ಜಿಗಜೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮುಡ್ಡಿ, 16. ಉದರಿದ ಸಾರಗದಕೊಂಬು 17. ಗುಗ್ಗಳ, 18. ಬೇಲದಕಾಂಣಿ, 19. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟ್ ವಿನಹಾ) 20. ಶೀತಾಫಲದಹಣ್ಣು, 21. ಬೆಂಡೆನಾರು, 22. ಬೇವಿನಬೀಜ, 23. ಇಪ್ಪೆಬೀಜ 24. ಅಳಲೇಕಾಯಿ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ್ ಫಾರೆಸ್ಟ್ ಸುತ್ತ ಇರುವ ಹಳ್ಳಿಗಳ ಅಳಲೆಕಾಯಿ ಸೇರಿ ಇಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡಸಹಳ್ಳಿ, 6. ಮೂರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಡಗಳ್ಳಿ, 6. ನಾರಣಾಪುರ, 7. ಮೂದನಹಳ್ಳಿ, 8. ಕರ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚೆಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂಕಪುರ, 8. ವೊದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಬಂದು ತಾಲ್ಲೂಕಿಗೂ ಬೇರೆಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಬಂದು ದರಖಾಸ್ತಿನೊಡನೇ (100) ಬಂದು ನೂರು ರೂಪಾಯಿನ ಕೋರ್ಟು ನೋಟ್ ಶೇವಣಿ ಬಗ್ಗೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಪೆ ಮೇಲೆ " ಪಸಾರೆ ದರಖಾಸ್ತು " ಎಂದು ಬರದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಹಾಸ್ತು ದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ 1907ನೆ ಇಸವಿ ಸೆಪ್ಟಂಬರ್ ತಾರೀಖು 2ರಲ್ಲಿ ದಿನ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ವಡಿಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರಿ ದರಖಾಸ್ತುದಾರನಿಗೆ ಕೂಡ್ಲೆ ಕಳುಹಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸು ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಶೇವಣಿ ಮೊಬಲಗು ಶೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಬಂಪಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣಿ ಮಾಡಬೇಕು. ಮತ್ತು ಈ ಮೂರು ದಿನಗಳಲ್ಲಿ ಈ ಇಸ್ತಿಹಾರ್‌ನಲ್ಲಿ ಕಂಡ ಪರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ಶೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡಲ್ಪಡುವದು.

9. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಪ್ರಕಾರ ವೀರನಡಿಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 3 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಕೇಸು ಕೊಳ್ಳಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರೆ ಅವನ ಡಿಪಾಜಿಟ್ಟು ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಗುತ್ತಾ ಇಜಾರೆಯನ್ನು ರದ್ದು ಮಾಡಲಾದೀತು. ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರ್ರೆ ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಜಿಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅವುರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ ೧೯೦೭ನೆ ಇಸವಿ ಜೂನ್ ತಾರೀಖು 10ರಲ್ಲು ಕೋಲಾರದಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ತೀರ್ಮಾನಗಳು

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರವರು, ಪ್ರೆಸಿಡೆಂಟರು.
2. ,, ಹರ್ಸೇಅಲ್ಲಿ ಸಾಹೇಬರವರು, ವೈಸ್ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾಯರವರು, ಕೋಲಾರ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರು.
4. ,, ಜೆ. ಆರಾವಮುಬೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು.
5. ,, ನರಸಿಂಗರಾವು ಪೂರ್ಣೈಯ್ಯನವರು, ಮಾಲೂರು ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು.
6. ,, ಪೊನ್ನ ಸಾಮಿಪಿಳ್ಳೆಯವರು, ಡಿ॥ ವೈದಿಕಲ್ ಮತ್ತು ಸ್ಯಾನಿಟೆರಿ ಆಫಿಸರು.
7. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.
8. ,, ಎಸ್. ಗೋಪಾಲರಾಯರವರು, ಸ್ಕೂಲ್ ಡಿ॥ ಇನ್ಸ್ಪೆಕ್ಟರ್.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಸ್ (ಡಿ)

1. ಮೆ॥ ಮುನಿನಾರಾಯಣ ಶೆಟ್ಟಿಯವರು, ಕೋಲಾರ.
2. ,, ರಾಮರಾಪುರವರು, ಮಾಲೂರು.
3. ,, ದೊಂತಿ ಚಿಕ್ಕ ಸುಬ್ಬಾಯಪ್ಪನವರು, ಶಿಡ್ಲಘಟ್ಟ.
4. ,, ಚಾಂಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಗೈಯ್ಯನವರು, ಬವರಿಂಗಪೇಟೆ.
6. ,, ಕಾಸ್ತಿ ಹೈದರಸಾಹೇಬರವರು, ಮುಳಬಾಗಲು.
7. ,, ಮಹಮದ್‌ಹರ್ಸೆಸಾಹೇಬರವರು, ಶ್ರೀನಿವಾಸಪುರ.
8. ,, ಲಕ್ಷ್ಮಣರಾಯರವರು, ಗುಡಿಬಂಡೆ.
9. ,, ರಾಮಣ್ಣನವರು, ಗೌರಿಬಿದನೂರು.
10. ,, ನಾರಾಯಣಸಾಮಿ ಶೆಟ್ಟಿಯವರು, ಚಿಕ್ಕಬಳ್ಳಾಪುರ.